**ಎಸ್ ಸಿ ನಂ. 5055/2021**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿ ಡಬ್ಲೂಃ** 16

**ಪಿ ಡಬ್ಲೂಃ** 6

| | |
|---|---|
| ಸಾಕ್ಷಿಯ ಹೆಸರು - | ಸರ್ದಾರ್ ಖಾನ್ |
| ತಂದೆಯ ಹೆಸರು - | ಅಕ್ಬರ್ |
| ವಯಸ್ಸು - | 35 ವರ್ಷ |
| ಉದ್ಯೋಗ - | ಕೂಲಿ ಕೆಲಸ |
| ವಾಸಸ್ಥಳ - | ಹೊಸಪೇಟೆ |

**ಸಾಕ್ಷಿಯನ್ನು ದಿನಾಂಕಃ 09-06-2026 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಪಿ. ಪಿ. ಅವರಿಂದ**

ಮೃತ ಮೌಲಾಬೀ ನನ್ನ ಸೊಸೆ. ಆರೋಪಿ ಆಕೆಯ ಗಂಡ. 5 ವರ್ಷಗಳ ಹಿಂದೆ ಆಕೆ ಹೊಟ್ಟೆ ನೋವಿನಿಂದ ನರಳಿ ತೀರಿಕೊಂಡಿದ್ದಾಳೆ. ಆರೋಪಿ ಆಕೆಯೊಂದಿಗೆ ಜಗಳವಾಡಿ, ಕಿರುಕುಳ ನೀಡಿ, ಸಾಯುವಂತೆ ಪ್ರಚೋದನೆ ಮಾಡಿದ್ದರಿಂದ ಆಕೆ ಮೃತ ಪಟ್ಟಿದ್ದಾಳೆ ಎಂದು ಪೋಲಿಸರ ಮುಂದೆ ಹೇಳಿಲ್ಲ. ಮು ಮಾ 1 ನ್ನು ನಾನು ನೋಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಪಿ ಪಿ ಅವರಿಂದ**

ಆರೋಪಿ ಮೃತ ಮೌಲಾಬೀ ಯನ್ನು ಮದುವೆ ಮಾಡಿಕೊಂಡಿದ್ದು, ಕುಡಿದು ಅಕೆಯೊಂದಿಗೆ ಜಗಳವಾಡಿ, ಕಿರುಕುಳ ನೀಡಿ, ಸಾಯುವಂತೆ ಪ್ರಚೋದನೆ ಮಾಡಿದ್ದರಿಂದ ಆಕೆ ನೇಣು ಬಿಗಿದುಕೊಂಡು ಮೃತ ಪಟ್ಟ ವಿಚಾರ ತಿಳಿದು ಪೋಲಿಸರ ಮುಂದೆ "ನಾನು ............. ನೀಡಿರುತ್ತೇನೆ" ಎಂದು ನಿಪಿಃ 9 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ವಿ ಬಿ., ವಕೀಲರಿಂದಃ ಇಲ್ಲಾ.**

ಮರು ವಿಚಾರಣೆಃ ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ವಿಜಯನಗರ ಜಿಲ್ಲೆ, ಹೊಸಪೇಟೆ.